(ಸದನವು 10 ಗಂಟೆ 40 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:– ಒಂದು ಸಣ್ಣ ಪ್ರಕಟಣೆ ಇದೆ.

1. : ಪ್ರಕಟಣೆ :

ದಿನಾಂಕ: 11.07.2014ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ಲೋಕಾರ್ಪಣೆ ಮಾಡಿರುವಂತಹ ಕರ್ನಾಟಕ ಕಾನೂನುಗಳು ಕ್ರೂಢೀಕೃತ ಸಂಪುಟಗಳ ಪರಿಷ್ಕೃತ ಆವೃತ್ತಿಯ ಪುಸ್ತಕಗಳನ್ನು ಮಾನ್ಯ ಸದಸ್ಯರ ಉಪಯೋಗಕ್ಕಾಗಿ ವಿತರಿಸಲಾಗುತ್ತಿದ್ದು ಸದರಿ ಪುಸ್ತಕಗಳನ್ನು ವಿಧಾನಸಭೆಯ ಸೂಚನಾಪತ್ರ ಶಾಖೆಯ ಕೊಠಡಿ ಸಂಖ್ಯೆ: 130ರಲ್ಲಿ ಪಡೆಯಬೇಕಾಗಿ ಈ ಮೂಲಕ ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ಒಂದು box ಇದೆ ಇದನ್ನು ತಮ್ಮ ರೂಮಿಗೆ ಕಳುಹಿಸಿಕೊಡಿ ಎಂದರೆ ಅಲ್ಲಿಗೆ ಕಳುಹಿಸಿ ಕೊಡುತ್ತೇವೆ.

ಅಧ್ಯಕ್ಷರು:– ಈಗ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ಇದೆ. ಏನು ಮಾಡೋಣ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಅದನ್ನು ತಾವು ಸಾಯಂಕಾಲದ ಮೇಲೆ ತೆಗೆದುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾವು ಅದನ್ನು ಪಾಸ ಮಾಡಿಕೊಡುತ್ತೇವೆ ಸಾಯಂಕಾಲದ ಮೇಲೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಮಾನ್ಯಮಂತ್ರಿಗಳೆ, ಮಾನ್ಯ ಸದಸ್ಯರುಗಳಿಗೆ ರಾತ್ರಿ ಕೊಟ್ಟಿದ್ದಾರಂತೆ ಅವರು ಯಾರು ಓದಿಕೊಂಡಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ವೈ.ಎಸ್.ವಿ. ದತ್ತಾ:– ನಮಗೆ ನಾವು ಇಲ್ಲಿಗೆ ಬಂದ ಮೇಲೆ ಕೊಟ್ಟಿದ್ದಾರೆ.

ಅಧ್ಯಕ್ಷರು:– ಕೆರೆಗೆ ಸಂಬಂಧಪಟ್ಟಂತೆ ಮೊದಲ ಬಾರಿಗೆ ಈ ವಿಧೇಯಕ ಬಂದಿದ್ದು ಇದನ್ನು ಮಾಡುವಾಗ ....

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಎಲ್ಲಾ ಸದಸ್ಯರುಗಳು ಈ Tank Authority ಬಗ್ಗೆ ಮಾತನಾಡುವಾಗ ಕೊಟ್ಟಂತಹ ಎಲ್ಲಾ ಸಲಹೆಗಳನ್ನು ಸರ್ಕಾರವು ಒಪ್ಪಿಕೊಂಡು ಅದನ್ನು amendment ರೂಪದಲ್ಲಿ ತಂದಿದ್ದೇವೆ. It is only an amendment.

ಶ್ರೀ ವೈ.ಎಸ್.ವಿ. ದತ್ತಾ:– ಈ ಬಿಲ್ ಅನ್ನು ನಾವು ಸಾಯಂಕಾಲ pass ಮಾಡಿಕೊಡುತ್ತೇವೆ.

ಅಧ್ಯಕ್ಷರು:– ಮಧ್ಯಾಹ್ನ lunch ಆದ ತಕ್ಷಣ ಈ ವಿಧೇಯಕವನ್ನು ತೆಗೆದುಕೊಳ್ಳೋಣ. ಮಾನ್ಯ ಉಪಾಧ್ಯಕ್ಷರು ಈಗ ವರದಿಯನ್ನು ಸಲ್ಲಿಸುತ್ತಾರೆ.

ಶ್ರೀ ಶಿವರಾಜ ಎಸ್ ತಂಗಡಗಿ (ಸಣ್ಣ ನೀರಾವರಿ ಸಚಿವರು):– ನೀವು ಏನೇನು ಸಲಹೆಗಳನ್ನು ಕೊಟ್ಟಿದ್ದೀರಿ ಅವೆಲ್ಲವೂ ಸಹ ಆಗಿದೆ.

ಅಧ್ಯಕ್ಷರು:– ಈಗ ವರದಿಯನ್ನು ಸಲ್ಲಿಸುವುದು. ಮಾನ್ಯ ಉಪಾಧ್ಯಕ್ಷರೆ ತಾವು ವರದಿಯನ್ನು ಸಲ್ಲಿಸಿ.

2) : ವರದಿಗಳನ್ನೊಪ್ಪಿಸುವುದು :

1) ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ):– ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿನ ಸಮಿತಿಯ ಏಳನೇ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.